


ಸಾತೋಡಿ

# ಜಲಪಾತಗಳ ತವರೂರಿನಲ್ಲಿ..

ಸಾತೋಡಿಯ ಸುಂದರಿ ಮತ್ತು ಮಾಗೋಡಿನ ಹೊಲತಿ ಜೋಗಗಳನ್ನು ನೋಡಲು ಮಳೆಗಾಲದಲ್ಲಿ ಸಾವಿರಾರು ಪ್ರವಾಸಿಗರು ಬರುತ್ತಾರೆ.

■ ಪಿ.ಕೆ.ರವಿಕುಮಾರ್

ಜಲಪಾತಗಳ ತವರೂರು ಉತ್ತರ ಕನ್ನಡ ಜಿಲ್ಲೆ. ಮುಂಗಾರಿನ ವೇಳೆ ಇಲ್ಲಿನ ದಟ್ಟಾರಣ್ಯದಲ್ಲಿ ಧುಮ್ಮಿಕ್ಕಿ ಹರಿಯುವ ಜಲಧಾರೆಗಳು ಅಸಂಖ್ಯ. ಒಂದೊಂದು ಜಲಪಾತವೂ ತನ್ನದೇ ವೈಶಿಷ್ಟ್ಯದೊಂದಿಗೆ ಪ್ರವಾಸಿಗರ ಪಾಲಿನ ಸ್ವರ್ಗ ಎನಿಸಿವೆ. ಈ ಸಾಲಿನಲ್ಲಿ ಸಾತೋಡಿ ಹಾಗೂ ಮಾಗೋಡ ಜಲಪಾತಗಳು ಮುಂಚೂಣಿಯಲ್ಲಿವೆ.

ಈ ಎರಡೂ ಜಲಪಾತಗಳು ಯಲ್ಲಾಪುರ ತಾಲ್ಲೂಕಿನ ಅರಣ್ಯ ಪ್ರದೇಶದ ಮಡಿಲಲ್ಲೇ ಇರುವುದು ವಿಶೇಷ. ಪ್ರವಾಸಿಗರಿಗೆ ಈ ತಾಣಗಳು ವಿಭಿನ್ನ ಅನುಭವ ನೀಡುತ್ತವೆ. ಯಲ್ಲಾಪುರ ಪಟ್ಟಣದಲ್ಲಿ ಉಳಿದರೆ ಈ ಎರಡೂ ಜಲಪಾತಗಳ ವೈಭೋಗವನ್ನು ಒಂದೇ ದಿನದಲ್ಲಿ ಕಣ್ತುಂಬಿಕೊಳ್ಳಬಹುದು. ರುದ್ರ ರಮಣೀಯವಾದ ಈ ಜಲಧಾರೆಯನ್ನು ವೀಕ್ಷಿಸಲು ರಾಜ್ಯದ ನಾನಾ ಭಾಗಗಳಿಂದ ಪ್ರವಾಸಿಗರು ತಂಡೋಪ ತಂಡವಾಗಿ ಇಲ್ಲಿಗೆ ಬರುತ್ತಾರೆ. ಇಲ್ಲಿನ ನಿಸರ್ಗದ ಸೌಂದರ್ಯ ನೋಡುಗರಲ್ಲಿ ಅದ್ಭುತ ಲೋಕವನ್ನೇ ಸೃಷ್ಟಿಸುತ್ತದೆ.

## 'ಸಾತೋಡಿ'ಯ ಸುಂದರಿ

ಸಾತೋಡಿ ಜಲಪಾತವು ಉತ್ತರಕನ್ನಡ ಜಿಲ್ಲೆಯ 'ನಯಾಗಾರ' ಎಂತಲೇ ಖ್ಯಾತಿ ಪಡೆದಿದೆ. ದಬ್ಬೆಸಾಲ ಎಂಬ ಚಿಕ್ಕ ನದಿ ಕಾಳಿನದಿಯನ್ನು ಸೇರುವ ಪೂರ್ವದಲ್ಲಿ ಸುಮಾರು 32 ಮೀಟರ್ ಎತ್ತರದಿಂದ ಧುಮ್ಮಿಕ್ಕಿ ಜಲಪಾತವನ್ನು ಸೃಷ್ಟಿಸಿದೆ. ಮಳೆಗಾಲದ ವೇಳೆ ಇಲ್ಲಿ ಎಲ್ಲಿ ನೋಡಿದರೂ ಹಚ್ಚ ಹಸಿರು ಕಂಗೊಳಿಸುತ್ತದೆ. ಹಸಿರುಡುಗೆ ತೊಟ್ಟ ಇಲ್ಲಿನ ಬಂಡೆಗಲ್ಲಿನ ಮೇಲಿಂದ ಬೆಳ್ನೊರೆಯ ಹಾಲಿನಂತೆ ಧುಮ್ಮಿಕ್ಕುವ ಪರಿ ಅನನ್ಯ. ಈ ಶ್ವೇತ ಸುಂದರಿಯ ಚೆಲುವನ್ನು ಎಷ್ಟು ಸಲ ನೋಡಿದರೂ ಮತ್ತೆ ಮತ್ತೆ ನೋಡಬೇಕು ಎನ್ನುವ ಬಯಕೆ ಮನದಲ್ಲಿ ಮೂಡದೇ ಇರದು. ಧರೆಗೆ ಇಳಿದ ನೀರು ಕೊಡಸಳ್ಳಿ ಜಲಾಶಯದ ಮೂಲಕ ಕಾಳಿ ನದಿಯನ್ನು ಸೇರುತ್ತದೆ.

## ಹೋಗುವುದು ಹೇಗೆ?

ಈ ಜಲಪಾತವು ಯಲ್ಲಾಪುರದಿಂದ ಸುಮಾರು 30 ಕಿ.ಮೀ. ದೂರದಲ್ಲಿದೆ. ಪಟ್ಟಣದಿಂದ ಹುಬ್ಬಳ್ಳಿಗೆ ಹೋಗುವ ಮಾರ್ಗದಲ್ಲಿ (ಎನ್.ಎಚ್–63) 5 ಕಿ.ಮೀ. ದೂರ ಸಾಗಿದರೆ ಜಲಪಾತಕ್ಕೆ ಹೋಗಲು ಎಡಕ್ಕೆ ಒಂದು ತಿರುವು ಸಿಗುತ್ತದೆ. ಅಲ್ಲಿಂದ 25 ಕಿ.ಮೀ. ದೂರ ಕ್ರಮಿಸಿದರೆ ಜಲಪಾತ ತಾಣವನ್ನು ತಲುಪುತ್ತೇವೆ. ಅಲ್ಲಿ ಪಾರ್ಕಿಂಗ್ ಸ್ಥಳದಲ್ಲಿ ವಾಹನವನ್ನು ನಿಲುಗಡೆ ಮಾಡಿ, 800 ಮೀಟರ್‌ನಷ್ಟು ದೂರ ಕಾಲ್ನಡಿಗೆಯಲ್ಲಿ ಸಾಗಿದರೆ ಜಲಪಾತದ ಸನಿಹವನ್ನು ಮುಟ್ಟುತ್ತೇವೆ. ಸುರಕ್ಷತೆಯೊಂದಿಗೆ ನೀರಿಗಿಳಿದು ಖುಷಿ ಪಡಬಹುದು. ಆದರೆ ನೀರು ಧುಮ್ಮಿಕ್ಕುವ ಸ್ಥಳಕ್ಕೆ ತೆರಳುವುದು ಅಪಾಯಕಾರಿ.

ಯಲ್ಲಾಪುರದಿಂದ ಸಾತೋಡಿ ಜಲಪಾತಕ್ಕೆ ತೆರಳಲು ಯಾವುದೇ ಸಾರಿಗೆ ವ್ಯವಸ್ಥೆ ಇಲ್ಲ. ಹೀಗಾಗಿ ಪ್ರವಾಸಿಗರು ಸ್ವಂತ ವಾಹನದಲ್ಲೇ ಬರಬೇಕು. ಸೆಪ್ಟೆಂಬರ್‌ನಿಂದ ಮಾರ್ಚ್ ವೀಕ್ಷಣೆಗೆ ಸರಿಯಾದ ಸಮಯ. ಈ ಜಲಪಾತವೂ ಕಾಡಿನಲ್ಲಿ ಇರುವುದರಿಂದ ಸಮೀಪದಲ್ಲಿ ಹೋಟೆಲ್ ಅಥವಾರ ಅಂಗಡಿಗಳು ಇಲ್ಲ. ಹೀಗಾಗಿ ತಿಂಡಿ, ಊಟಕ್ಕೆ ಯಲ್ಲಾಪುರ ಪಟ್ಟಣವನ್ನೇ ಆಶ್ರಯಿಸಬೇಕು.

## ರಸ್ತೆ ಸುಧಾರಣೆ

ರಾಷ್ಟ್ರೀಯ ಹೆದ್ದಾರಿ– 63ರ ತಿರುವಿನಿಂದ ಜಲಪಾತಕ್ಕೆ ತೆರಳುವ ರಸ್ತೆಯು ತೀರ ಹದಗೆಟ್ಟಿತ್ತು. ಮಳೆಗಾಲದಲ್ಲಿ ಕೆಸರುಗದ್ದೆಯಂತಿದ್ದ ರಸ್ತೆಯಲ್ಲಿ ತೆರಳುವಷ್ಟರಲ್ಲಿ ಪ್ರವಾಸಿಗರು ಹೈರಾಣಾಗುತ್ತಿದ್ದರು. ಆದರೆ ಪ್ರವಾಸೋದ್ಯಮ